### ಅದೆಷ್ಟು ಸ್ಮರಿಸಿದರೂ ಸಾಲದು

‘ನೋಡಬನ್ನಿ ಗವಿಮಠ ಜಾತ್ರೆ’ (ಜ. 08, ಪ್ರಮೋದ ಕುಲಕರ್ಣಿ) ‘ಜೀವನ ಜಾತ್ರೆ’ಯ ಬರಹ ಸೇವಾಕಾರ್ಯದ ಮಹತ್ವವನ್ನು ತಿಳಿಹೇಳಿದೆ. ಲಕ್ಷಾಂತರ ಭಕ್ತರಿಗೆ ದಾಸೋಹಕ್ಕೆ ತಮ್ಮದೇ ಕಾಣಿಕೆ ನೀಡುವ (ತಮ್ಮ ದಿನನಿತ್ಯದ ಶ್ರಮದಾಯಕ ಕಾರ್ಯಗಳನ್ನು ನಿಭಾಯಿಸಿ) ಅಸಂಖ್ಯಾತ ತಾಯಂದಿರ ರೊಟ್ಟಿಯ ಕೈಂಕರ್ಯವನ್ನು ಅದೆಷ್ಟು ಸ್ಮರಿಸಿದರೂ ಸಾಲದು. ಜಾಗೃತಿ ಜಾಥಾಗಳ ಮೂಲಕ ಸಮಾಜಮುಖಿ ಕೆಲಸಗಳನ್ನು ಮಾಡುತ್ತ ‘ಎಲ್ಲರನ್ನೂ ಪ್ರೀತಿಸುವೆ, ಎಲ್ಲರ ಸೇವೆ ಮಾಡುವೆ’ ಎನ್ನುವ ಅಭಿನವ ಗವಿಮಠದ ಸ್ವಾಮೀಜಿಯವರ ಕಾರ್ಯವೂ ಶ್ಲಾಘನೀಯ. ಜಾತ್ರೆಯಲ್ಲಿ ಪಾಲ್ಗೊಳ್ಳಬೇಕು ಎನ್ನುವ ತುಡಿತ ಕಾಡತೊಡಗಿದೆ.

–ಓಂಕಾರ್ ಗುರುಸಿದ್ದಪ್ಪ ಕೊಟ್ರೆ, ಬೆಂಗಳೂರು



### ಕಾಯಕವೇ ಕೈಲಾಸ

ಜಾತ್ರೆಯ ಲೇಖನ ತುಂಬಾ ಚೆನ್ನಾಗಿದೆ. ಮಠದ ಶ್ರೀಗಳು ಮತ್ತು ಸ್ವಯಂ ಸೇವಾ ಮನಸ್ಸಿನ ಭಕ್ತರ ನಡೆ ಶ್ಲಾಘನಾರ್ಹ. ‘ಕಾಯಕವೇ ಕೈಲಾಸ’ ಎಂಬ ಬಸವಣ್ಣನವರ ಮಾತು ಕೊಪ್ಪಳದ ಗವಿಮಠದಲ್ಲಿದೆ.

–ಜಗದೀಶ ಬಿ. ಹೊಸೂರು, ಮೈಸೂರು

### ಜಾತ್ರೆಯೆಂಬ ಆಕರ್ಷಣೆ

‘ನೋಡಲು ಮರೆಯದಿರಿ, ಮರೆತು ನಿರಾಶರಾಗದಿರಿ’ (ಜ. 08, ಬಸವರಾಜ ಹವಾಲ್ದಾರ) ಲೇಖನದಲ್ಲಿ ಬಾದಾಮಿಯ ಬನಶಂಕರಿ ಜಾತ್ರೆಯ ವೈಭವದೊಂದಿಗೆ, ಜಾತ್ರೆಯಲ್ಲಿ ಮರುಜೀವ ಪಡೆದುಕೊಳ್ಳುವ ಕಂಪನಿ ನಾಟಕಗಳ ಕುರಿತಂತೆಯೂ ರಸವತ್ತಾಗಿ ವಿವರಿಸಲಾಗಿದೆ. ಒಂದು ತಿಂಗಳ ಕಾಲ ನಡೆಯುವ ಕಂಪನಿ ನಾಟಕಗಳ ವೈಭವವನ್ನು ಕಟ್ಟಿಕೊಟ್ಟಿರುವ ರೀತಿ ಸೊಗಸಾಗಿದೆ. ಜನರು ಇಂದಿಗೂ ನಾಟಕಗಳೆಡೆಗೆ ಪ್ರೀತಿ ಉಳಿಸಿಕೊಂಡಿರುವುದು ನಾಟಕಗಳ ಆಕರ್ಷಣೆಯನ್ನು ಎತ್ತಿತೋರಿದೆ. ನಾಟಕ ಪ್ರದರ್ಶನಗಳ ಹಿಂದೆ ಹಲವರ ಶ್ರಮವನ್ನು ವಿವರಿಸಿರುವುದು ಮನಮುಟ್ಟಿತು.

–ಶೈಲಾ ಎಂ., ಬೆಂಗಳೂರು

## ಹೊಸ ವರ್ಷ ಹೊಸ ಹರ್ಷ!



### ಹೊಸ ವರ್ಷಕ್ಕೆ ಆತ್ಮವಿಶ್ವಾಸದ ನುಡಿಗಳು

‘ಸುಧಾ’ ಪತ್ರಿಕೆಯ ಹೊಸ ವರ್ಷದ ಸಂಚಿಕೆಯ ಪುಟಗಳನ್ನು ತಿರುವಿದ ಕೂಡಲೇ ‘ಹೊಸ ವರ್ಷ ಹೊಸ ಹರ್ಷ’ ಎಂಬ ಮುಖಪುಟ ಲೇಖನ ಕಂಡಿತು.

‘ಹೊಸ ಮನ್ವಂತರಕ್ಕೆ ನಾಂದಿ ಹಾಡಲಿ’ – ಶುಭ ಧನಂಜಯ ಅವರು ಹೊಸದಾಗಿ ಆಲೋಚನೆಯನ್ನು ತೆರೆದಿಟ್ಟ ಪರಿ ತುಂಬಾ ಇಷ್ಟವಾದವು. ನಂತರದಲ್ಲಿ ‘ಟೆಕ್ ಯುದ್ಧಕ್ಕೆ ಹೇಗೆ ನಾವು ಸಾಕ್ಷರರಾಗಬೇಕು’ ಎಂಬ ಕುರಿತು ಅನಂತ ಪ್ರಭು ಅವರ ಬರಹ ಓದಿದೆ. ಅವರು ಹೇಳಿದ ಒಂದು ಮಾತು ನನ್ನ ಗಮನ ಸೆಳೆಯಿತು. ‘ರಾಷ್ಟ್ರೀಯ ದೃಢೀಕರಣ ಪದರ’ ಎಂಬುದು. ಫೇಕ್ ಕ್ರಿಯೇಟಿವಿಟಿಗಳ ಮೂಲ ಪತ್ತೆ ಹಚ್ಚಲು, ಸತ್ಯ ಕಂಡುಕೊಳ್ಳಲು, ಕಾನೂನು ಕ್ರಮ ಜರುಗಿಸಲು ಇಂದಿನ ಸೈಬರ್ ಜ್ಞಾನದ ಅಗತ್ಯ ಇದೆ ಎಂದು ಬಹಳ ಚೆನ್ನಾಗಿ ಬರೆದಿದ್ದಾರೆ. ನಂತರ ಡಾಕ್ಟರ್ ಅರುಣಾ ಯಡಿಯಾಳ್‌ರವರ ‘ಬದುಕುವ ಕಲೆ ಕರಗತವಾಗಬೇಕು’, ರಂಗಕರ್ಮಿ ವೇಣು ಹೆಣ್ಣೂರುರವರ ‘ಪ್ರೀತಿ ಗಾಳಿಯನ್ನು ಹೊತ್ತು ತರಲಿ’ ಎಂಬ ಬರಹ, ಯುವ ರಂಗನಟ ನಿರ್ದೇಶಕ ನವೀನ್ ಭೂಮಿಯವರ ‘ರಂಗಭೂಮಿಯು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನಕ್ಕೆ ಒಗ್ಗಬೇಕು’ ಎಂಬ ಮಾತು, ‘ಸಂಗೀತ ಹೃದಯದ ಭಾಷೆಯನ್ನು ತೆರೆಯುತ್ತದೆ, ಭಾವ ಜೀವ ಸೌಹಾರ್ದ ಕಟ್ಟಲು ಸಂಗೀತದ ಅವಶ್ಯಕತೆ ಇದೆ’ ಎಂಬ ಗಾಯಕಿ ಸಂಗೀತಾ ಕಟ್ಟಿ ಅವರ ಮಾತುಗಳನ್ನು ಓದಿ ತುಂಬಾ ಖುಷಿಯಾಯಿತು. ಹೊಸ ವರ್ಷಕ್ಕೆ ಈ ತರಹದ ಆತ್ಮವಿಶ್ವಾಸ ಮತ್ತು ಕನಸುಗಳನ್ನು ಬಿತ್ತುವ ಮಾತುಗಳ ಅವಶ್ಯಕತೆ ಇದೆ ಅಂತ ಅನಿಸಿತು.

–ರಮೇಶ ಗಬ್ಬೂರ್, ಬೆಂಗಳೂರು

### ಎಚ್ಚರಿಕೆ!

‘ಸಂಚು’ (ಜ. 08, ದೀಪಿಕಾ ಚಾಟೆ) ಕಥೆಯು ಕಥೆ ಎನಿಸದೇ ಎಚ್ಚರಿಕೆಯ ಗಂಟೆ ಅನಿಸಿತು. ಪ್ರಸ್ತುತ ಇಂತಹ ಘಟನೆಗಳು ಆಗಾಗ ನಡೆಯುತ್ತಿರುವುದನ್ನು ಪ್ರತಿಬಿಂಬಿಸಿದೆ. ಎಷ್ಟೋ ಮುಗ್ಧ ಯುವಕ, ಯುವತಿಯರು ಈ ಜಾಲಕ್ಕೆ ಸಿಲುಕಿ ಅವರ ಜೀವನ ಹಾಳಾಗುತ್ತಿದೆ. ಎಚ್ಚರಿಕೆಯಿಂದ ವ್ಯವಹರಿಸಬೇಕು.

–ಭಾರತೀ ಗಂಗಾಧರ್, ಬೆಂಗಳೂರು

### ಉಪಯುಕ್ತ ತಂತ್ರಜ್ಞಾನ

‘ಕಾಡಾನೆ ಹಿಮ್ಮೆಟ್ಟಿಸುವ ಎಐ ಕ್ಯಾಮೆರಾ’ (ಜ. 08, ಶಶಿಕುಮಾರ್ ಸಿ.) ತಂತ್ರಜ್ಞಾನ ಲೇಖನ ಆಸಕ್ತಿದಾಯಕವಾಗಿದೆ. ಮಾನವ–ಕಾಡುಪ್ರಾಣಿಗಳ ಸಂಘರ್ಷದ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಇಂಥದ್ದೊಂದು ಪ್ರಯೋಗ ಯಶಸ್ವಿಯಾದರೆ ಬಹಳ ಉಪಯುಕ್ತವಾಗುತ್ತದೆ.

–ಕನಕ ಎಸ್.ಟಿ., ಮೈಸೂರು

### ಗುನುಗುನಿಸುವ ಮಾತು

‘ಅಜ್ಜಿಯೊಂದು ಪ್ರಭಾತ’ (ಜ. 08, ಜಿ. ನಾಗೇಂದ್ರ ಕಾವೂರು) ‘ಕಾವ್ಯಮಂಥನ’ದಲ್ಲಿ ಲೇಖಕರ ಅಜ್ಜಿಯ ಮಾತು, ಅಲ್ಲಲ್ಲ, ಅದು ಅತ್ಯುತ್ತಮ ಕವಿತೆಯ ಸಾಲುಗಳು. ‘ಸೂರ್ಯ ಮುಳುಗಿದರೆ...’ ನನ್ನ ಮನಸ್ಸಲ್ಲೂ ಪದೇ ಪದೇ ಗುನುಗುನಿಸುತ್ತಿದೆ! ಈ ಅಜ್ಜಿ ತುಂಬಾ ಜೀವನೋತ್ಸಾಹ ತುಂಬಿಕೊಂಡು ಬದುಕನ್ನು ಜೀವಿಸಿದವರು ಅಂತ ಅನ್ನಿಸಿತು. ಇಂಥಾ ಅಜ್ಜಿಯ ಬದುಕಿನ ಬಗ್ಗೆ ಕುತೂಹಲ, ಗೌರವ ಮೂಡಿತು.

– ಎಲ್.ಟಿ. ಸರಸ್ವತಿ, ಸಾಗರ

### ಅದ್ಭುತವೆನಿಸುವ ತಾಣ



‘ಸಹಸ್ರಮಾನದ ಸೆಕ್ವೋಯಾ’ (ಜ. 08, ಪ್ರಕಾಶ ಹೆಗಡೆ) ಪ್ರವಾಸ ಲೇಖನ ಚೆನ್ನಾಗಿದೆ. ನಾನು ಕೂಡ ಈ ಜಾಗ ನೋಡಿದ್ದೇನೆ. ಆ ದೈತ್ಯ ಮರಗಳ ತುದಿಯನ್ನು ನೋಡಿದರೆ ತಲೆ ತಿರುಗುತ್ತದೆ. ಅವುಗಳ ಕಾಂಡ ಬೃಹದಾಕಾರವಾಗಿರುತ್ತದೆ. ದೊಡ್ಡ ಮರದ ಪೊಟರೆಯಲ್ಲಿ ನಿಂತು ಛಾಯಾಚಿತ್ರ ತೆಗೆದುಕೊಂಡೆ. ನಿಜಕ್ಕೂ ಅದ್ಭುತ ಪ್ರವಾಸಿ ತಾಣ.

–ಟಿ.ಎಸ್. ನಾಗರಾಜ ರಾವ್

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in